ಪಿಡಬ್ಲೂ-1 ಓ.ಎಸ್.ನಂ.611/2017

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.04.11.2024**

## ಪಾಟಿ ಸವಾಲುಃ ಪ್ರತಿವಾದಿ-1 ನೇ ಪರ ಶ್ರೀ.ಎಲ್ ಕೆ ಆರ್ ವಕೀಲರಿಂದಃ

1. ನಾನು ಯರ್ತಗಾನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನಾನು ವಾಸವಾಗಿರುವ ಮನೆಯ ಖಾತೆ ಸಂಖ್ಯೆ.57/46 ಆಗಿರುತ್ತದೆ. ಸದರಿ ಮನೆಯಲ್ಲಿ ನಾನು ಮತ್ತು ನನ್ನ ತಂದೆ ತಾಯಿ ವಾಸವಾಗಿರುತ್ತೇವೆ. ಸದರಿ ಮನೆಯ ಒಟ್ಟು ವಿಸ್ತೀರ್ಣ 30*40 ಇರುತ್ತದೆ. ಸದರಿ ನಿವೇಶನವು ನಮಗೆ ಪಂಚಾಯಿತಿಯಿಂದ ಮಂಜೂರು ಆಗಿತ್ತು ಎಂದರೆ ಸರಿ. ಸದರಿ ನಿವೇಶನವನ್ನು ಸುಮಾರು 10 ವರ್ಷಗಳ ಹಿಂದೆ ಕಟ್ಟಿಸಿರುತ್ತೇವೆ. ನನ್ನ ತಂದೆಯ ತಮ್ಮನ ಹೆಸರು ಮುನಿರಾಜು ಎಂದರೆ ಸರಿ. ಸದರಿ ಮುನಿರಾಜು ರವರಿಗೆ ಪಂಚಾಯಿತಿಯಿಂದ 1 ನಿವೇಶನ ಮಂಜೂರು ಆಗಿದೆ ಎಂದರೆ ಸರಿ. ನಾನು ವಾಸವಾಗಿರುವ ಮನೆಯನ್ನು ಹೊರತು ಪಡಿಸಿ ಬೇರೆ ಯಾವುದೇ ನಿವೇಶನ ಮತ್ತು ಮನೆ ಇರುವುದಿಲ್ಲ. ನಮ್ಮ ಕುಟುಂಬಕ್ಕೆ ಅರ್ಧ ಎಕರೆ ಜಮೀನು ಇರುತ್ತದೆ.

2. ನಮ್ಮ ಊರಿನಲ್ಲಿ ವಾಸವಾಗಿರುವ ಅಣ್ಣಯ್ಯಪ್ಪ ಎಂಬುವವರು ನನಗೆ ಗೊತ್ತಿರುವುದಿಲ್ಲ. ದಿಃ25.04.1986 ರಲ್ಲಿ ನನ್ನ ತಂದೆಗೆ ಮೇಲ್ಕಂಡ ನಿವೇಶನ ಮಂಜೂರು ಆಗಿರುತ್ತದೆ. ಆ ರೀತಿ ಸದರಿ ನಿವೇಶನವು ಸರ್ವೆ ನಂ.57 ರಲ್ಲಿ ನಿರ್ಮಾಣ ಆಗಿರುತ್ತದೆ. ಸದರಿ ಸರ್ವೆ ನಂ.57 ಜಮೀನಿನಲ್ಲಿ ಅಂದಾಜು 100 ನಿವೇಶನಗಳನ್ನು ರಚಿಸಲಾಗಿರುತ್ತದೆ. ಆದರೆ ಸದರಿ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸದರಿ 100 ನಿವೇಶನಗಳ ಪೈಕಿ ಎಷ್ಟು ನಿವೇಶನಗಳನ್ನು ಮಂಜೂರು ಮಾಡಿದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯ ಹೆಸರಿಗೆ ಯಾವ ವರ್ಷದಲ್ಲಿ ಖಾತೆ ಆಯಿತು ಎಂದರೆ ಸಾಕ್ಷಿ ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಮಂಜೂರು ಆಗಿದ್ದ ಆಸ್ತಿಗೆ ಕಂದಾಯವನ್ನು ಪಾವತಿ ಮಾಡುತ್ತಿದ್ದೆವು. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ರೀತಿ 1986 ರಿಂದಲೂ ಸಹ ಕಂದಾಯವನ್ನು 5-6 ಬಾರಿ ಪಾವತಿ ಮಾಡಿರುತ್ತೇವೆ.

3. ನನ್ನ ತಂದೆ ದಿಃ10.03.2004 ರಲ್ಲಿ ಮ 8 ತಪಟ್ಟಿರುತ್ತಾರೆ. ನನ್ನ ತಂದೆ ಪೌತಿ ಆದ ನಂತರ 2017 ರಲ್ಲಿ ನಮ್ಮ ಹೆಸರಿಗೆ ಖಾತೆ ಮಾಡುವಂತೆ ಅರ್ಜಿ ಸಲ್ಲಿಸಿರುತ್ತೇವೆ. ಆ ರೀತಿ 1 ನೇ ವಾದಿಯ ಹೆಸರಿಗೆ ಖಾತೆ ಮಾಡುವಂತೆ ಅರ್ಜಿ ಸಲ್ಲಿಸಿರುತ್ತೇವೆ. 2004 ರಿಂದ 2017 ರವರೆಗೆ ಖಾತೆ ಬದಲಾವಣೆಗೆ ಯಾವುದೇ ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸರಿ. ದಾವಾ ಆಸ್ತಿಯು ನನ್ನ ತಂದೆಯ ಹೆಸರಿಗೆ ಮಂಜೂರು ಆದ ಬಗ್ಗೆ 2017 ರಲ್ಲಿ ಗೊತ್ತಾಗಿರುತ್ತದೆ. ದಾವಾ ಆಸ್ತಿಯಲ್ಲಿ ಪಾಳು ಬಿದ್ದಿರುವ ಮನೆ ಇದೆ ಎಂದರೆ ಸರಿ. ಸದರಿ ಮನೆಯನ್ನು 25 ವರ್ಷಗಳ ಹಿಂದೆ ನಿರ್ಮಾಣ ಮಾಡಿದ್ದು, ಮಳೆಗೆ ಬಿದ್ದು ಹೋಗಿದೆ ಎಂದರೆ ಸರಿ. ಸದರಿ ಮನೆಯ ಉತ್ತರಕ್ಕೆ 2 ನೇ ಪ್ರತಿವಾದಿಯ ಮನೆ ಇದೆ ಎಂದರೆ ಸರಿ. ಸದರಿ ಮನೆಯನ್ನು 2 ನೇ ಪ್ರತಿವಾದಿ 25 ವರ್ಷಗಳ ಹಿಂದೆ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ.

ಸದರಿ ಜಾಗ 2 ನೇ ಪ್ರತಿವಾದಿಗೆ ಮಂಜೂರು ಆಗಿತ್ತು ಎಂದರೆ ಸರಿ. ಆ ರೀತಿ 2 ನೇ ಪ್ರತಿವಾದಿ ಮನೆ ನಿರ್ಮಿಸುವಾಗ ದಾವಾ ಆಸ್ತಿಯಲ್ಲಿ 10 ಅಡಿಗಳನ್ನು ಒತ್ತುವರಿ ಮಾಡಿ ಮನೆ ಕಟ್ಟಿದ್ದಾರೆ ಎಂದರೆ ಸರಿ. ಆ ರೀತಿ ಮನೆ ನಿರ್ಮಾಣ ಮಾಡುವ ಸಂದರ್ಬದಲ್ಲಿ 10 ಅಡಿ ಒತ್ತುವರಿ ಮಾಡಿಕೊಂಡಿದ್ದ ವಿಚಾರ ನಮಗೆ ಗೊತ್ತಿರಲ್ಲಿಲ್ಲ ಎಂದರೆ ಸರಿ. ಸದರಿ ಒತ್ತುವರಿಯನ್ನು ತೆರವುಗೊಳಿಸಿ ಕೊಡುವಂತೆ ಪಂಚಾಯಿತಿಗೆ ನಾವು ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಈ ಬಗ್ಗೆ 2 ನೇ ಪ್ರತಿವಾದಿಯ ವಿರುದ್ದ ಪೋಲಿಸ್ ಠಾಣೆಯಲ್ಲಿ ಒತ್ತುವರಿ ಮಾಡಿಕೊಂಡಿದ್ದ ಬಗ್ಗೆ ದೂರು ನೀಡಿರುವುದಿಲ್ಲ ಎಂದರೆ ಸರಿ.

4. 2 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಒತ್ತುವರಿ ಮಾಡಿ ಮನೆ ಕಟ್ಟುವಾಗ 1 ನೇ ಪ್ರತಿವಾದಿ ತಡೆ ಮಾಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಒತ್ತುವರಿ ಮಾಡಿದ ಒಟ್ಟು ವಿಸ್ತೀರ್ಣ ಅಗಲ-10 ಅಡಿ ಮತ್ತು ಉದ್ದ-40 ಅಡಿ ಎಂದರೆ ಸರಿ. ಆ ರೀತಿ 1 ನೇ ಪ್ರತಿವಾದಿ ಒತ್ತುವರಿಯನ್ನು ಕೇಳಿದಾಗ 2 ನೇ ಪ್ರತಿವಾದಿಯು ನೀವು ಮನೆ ಕಟ್ಟುವ ಸಂದರ್ಬದಲ್ಲಿ ಬಿಟ್ಟುಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಅನುಮತಿ ಪಡೆದು ಒತ್ತುವರಿ ಮಾಡಿದ್ದ ಜಾಗದಲ್ಲಿ ಮನೆ ಕಟ್ಟಿದ್ದರು ಎಂದರೆ ಸರಿಯಲಲ. ನಮ್ಮ ಊರಿಗೆ ಹೊಂದಿಕೊಂಡಂತೆ ವಿಮಾನ ನಿಲ್ದಾಣ ಇದೆ ಎಂದರೆ ಸರಿ. ಆ ಕಾರಣದಿಂದ 1 ನಿವೇಶನಕ್ಕೆ 40 ರಿಂದ 50 ಲಕ್ಷ ಮೌಲ್ಯ ಇದೆ ಎಂದರೆ ಸರಿ.

5. ಯರ್ತಗಾನಲಹಳ್ಳಿ ಗ್ರಾಮವು ಅಣ್ಣೇಶ್ವರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಅಣ್ಣೇಶ್ವರ ಗ್ರಾಮ ಪಂಚಾಯಿತಿ ರವರು ಒಂದೇ ನಿವೇಶನಕ್ಕೆ 2-3 ಹಕ್ಕು ಪತ್ರಗಳನ್ನು ವಿತರಣೆ ಮಾಡಿದ್ದಾರೆ ಎಂದರೆ ಸರಿ. ಆ ರೀತಿ ಅಣ್ಣೇಶ್ವರ ಗ್ರಾಮ ಪಂಚಾಯಿತಿ ರವರು ದಾವಾ ಅಸ್ತಿಗೆ ಸಂಬಂದಿಸಿದಂತೆ 1 ನೇ ಪ್ರತಿವಾದಿಯ ಗಂಡನ ಹೆಸರಿಗೆ ಹಕ್ಕು ಪತ್ರ ನೀಡಿದ್ದರು ಎಂದರೆ ಸರಿಯಲ್ಲ. ನಾನು, ನನ್ನ ತಂದೆ ಮತ್ತು ಪಂಚಾಯಿತಿ ರವರು ಶಾಮೀಲಾಗಿ ಹಕ್ಕು ಪತ್ರವನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡನ ಹೆಸರು ನಂಜಪ್ಪ ಎಂದರೆ ಸರಿ. ಸದರಿ ನಂಜಪ್ಪ ರವರ ಹೆಸರಿಗೆ ಯರ್ತಗಾನಹಳ್ಳಿ ಗ್ರಾಮದಲ್ಲಿ 1 ನಿವೇಶನ ಮಂಜೂರು ಆಗಿದೆ ಎಂದರೆ ಸರಿಯಲ್ಲ. ಸದರಿ ನಂಜಪ್ಪ ರವರು ನಮ್ಮ ಗ್ರಾಮದ ಅಣ್ಣಯ್ಯಪ್ಪ ರವರ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಕಾರಣ ಅವರಿಗೆ ಯಾವುದೇ ನಿವೇಶನ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ 1 ನಿವೇಶನ ಮಂಜೂರು ಮಾಡಿಕೊಡುವಂತೆ ನಂಜಪ್ಪ ರವರು ಪಂಚಾಯಿತಿಗೆ 1986 ರಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅರ್ಜಿಯಂತೆ ದಿ:25.04.1986 ರಲ್ಲಿ ನಿವೇಶನ ಸಂಖ್ಯೆ.69 ನಂಜಪ್ಪ ರವರಿಗೆ ಮಂಜೂರು ಆಗಿತ್ತು ಎಂದರೆ ಸರಿಯಲ್ಲ. ಸದರಿ ನಿವೇಶನಕ್ಕೆ ಸಂಬಂದಿಸಿದಂತೆ ಅಣ್ಣೇಶ್ವರ ಗ್ರಾಮ ಪಂಚಾಯಿತಿ ರವರು ಹಕ್ಕು ಪತ್ರ ನೀಡಿದ್ದರು ಎಂದರೆ ಸರಿಯಲ್ಲ.

6. ನಿವೇಶನ ಸಂಖ್ಯೆ.69 ಕ್ಕೆ 1 ನೇ ಪ್ರತಿವಾದಿಯ ಗಂಡ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಆ ರೀತಿ ಹಕ್ಕು ಪತ್ರದ ಆಧಾರದ ಮೇಲೆ ಪಂಚಾಯಿತಿ ರವರು ಖಾತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ನಂಜಪ್ಪ ರವರು 1986 ರಿಂದ ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿವೇಶನ ಸಂಖ್ಯೆ.69 ಕ್ಕೆ ಸಂಬಂದಿಸಿದಂತೆ ಪಂಚಾಯಿತಿಯ ಎಲ್ಲಾ ದಾಖಲೆಗಳು ನಂಜಪ್ಪ ರವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆ.69 ರಲ್ಲಿ ಮನೆ ನಿರ್ಮಾಣ ಮಾಡುವ ಸಲುವಾಗಿ ನಂಜಪ್ಪ ರವರು ಹುಡ್ಕೊ ಯೋಜನೆ ಅಡಿಯಲ್ಲಿ ಸಾಲ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯಂತೆ ಅಧಿಕಾರಿಗಳು ಪರಿಶೀಲನೆ ಮಾಡಿ ನಂಜಪ್ಪ ರವರ ಹೆಸರಿಗೆ ಸಾಲ ಮಂಜೂರು ಆಗಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಸಾಲದ ಅಡಿಯಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಗಂಡ ಮನೆ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. ನಂಜಪ್ಪ ರವರು ತೀರಿಕೊಂಡ ನಂತರ 1 ನೇ ಪ್ರತಿವಾದಿಯ ಹೆಸರಿಗೆ ಪೌತಿಖಾತೆ ಆಗಿದೆ ಎಂದರೆ ಸರಿ. ನಂಜಪ್ಪ ಮತ್ತು ಅವರ ಹೆಂಡತಿ ರವರು ನಿವೇಶನ ಸಂಖ್ಯೆ.69 ರಲ್ಲಿ ಇದ್ದ ಮನೆಯಲ್ಲಿ ವಾಸವಾಗಿದ್ದರು, ಮಳೆಯಿಂದ ಬಿದ್ದ ಕಾರಣ ಈಗ ಬೇರೆ ಕಡೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆ.69 ರ ಎಲ್ಲಾ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**